**ದಿನಾಂಕಃ 25–06–2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

5. ನನ್ನ ಗಂಡ ಕೊಲೆಯಾಗುವ ದಿನ ಆತ ಪಿಂಕ್ ಬಣ್ಣದ ನಿಕ್ಕರ್ ಮತ್ತು ಕುತ್ತಿಗೆಯಲ್ಲಿ ಕಪ್ಪು ದಾರವನ್ನು ಧರಿಸಿದ್ದನು. ಆರೋಪಿಯು ಮೃತನನ್ನು ಕೊಲೆ ಮಾಡಲು ಉಪಯೋಗಿಸಿದ ಚಾಕುವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು–2 ಎಂದು ಗುರುತಿಸಲಾಗಿರುತ್ತದೆ.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ಆರು ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದು, ಸದ್ರಿ ವಸ್ತುಗಳ ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದನ್ನು ಗಮನಿಸಿ, ಮಾನ್ಯ ಪಿ.ಪಿ. ರವರಿಗೆ ಅವುಗಳನ್ನು ತೆರೆಯಲು ಅನುಮತಿಸಲಾಯಿತು.)**

6. ಸಾಕ್ಷಿ ತನ್ನ ಗಂಡ ಧರಿಸುತ್ತಿದ್ದ ಕನ್ನಡಕವನ್ನು ನೋಡಿ ಗುರುತಿಸಿದ್ದು, ಅದನ್ನು ಮುದ್ದೆ ಮಾಲು-5 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಗಂಡನ ಒಂದು ಚಪ್ಪಲಿಯನ್ನು ನೋಡಿ ಗುರುತಿಸಿದ್ದು, ಅದನ್ನು ಮುದ್ದೆ ಮಾಲು-6 ಎಂದು ಗುರುತಿಸಲಾಯಿತು. ಸಾಕ್ಷಿಯು ಅಡಿಕೆ ಮರದ ಪಟ್ಟಿಯನ್ನು ನೋಡಿ ಗುರುತಿಸಿದ್ದು, ಅದನ್ನು ಮುದ್ದೆ ಮಾಲು-7 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಗಂಡ ಧರಿಸಿದ್ದ ಲುಂಗಿ, ಶರ್ಟ್, ನಿಕ್ಕರನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮುದ್ದೆ ಮಾಲು-8 ರಿಂದ 10 ಎಂದು ಗುರುತಿಸಲಾಯಿತು. ಘಟನೆಯ ದಿನ ಆರೋಪಿ ಧರಿಸಿದ್ದ ಶರ್ಟ್ ಮತ್ತು ಲುಂಗಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು-1 ಮತ್ತು 3 ಎಂದು ಗುರುತಿಸಲಾಗಿರುತ್ತದೆ. ಚಾಸಾ-10 ರವರು ತನ್ನ ಮೊಬೈಲನಲ್ಲಿ ಚಿತ್ರಿಕರಿಸಿದ ದೃಶ್ಯಾವಳಿಯನ್ನು ಸಾಕ್ಷಿಗೆ ತೋರಿಸಲಾಗಿದ್ದು, ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ದೃಶ್ಯಾವಳಿಯಲ್ಲಿ ನನ್ನ ಗಂಡ, ಆರೋಪಿ, ಚಾಸಾ-11 ಮತ್ತು 12 ರವರು ಇದ್ದು, ಚಾಸಾ-11 ಮತ್ತು 12 ರವರು ಆರೋಪಿಗೆ ಸಮಾಧಾನ ಮಾಡುತ್ತಿರುತ್ತಾರೆ.

(ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ